**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 687
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 12.03.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಗಳಲ್ಲಿ ಡಿ ಸಿ ಮನ್ನಾ ಜಮೀನುಗಳ ಪರಿಕಲ್ಪನೆ ಇದೆ: ಪ್ರಸ್ತುತ ಈ ಜಮೀನುಗಳು ಯಾರ ಸ್ವಾಧೀನದಲ್ಲಿ ಇವೆ: (ವಿವರ ನೀಡುವುದು) | ಈ ಹಿಂದಿನ ಮದ್ರಾಸು ಪ್ರಾಂತ್ಯಕ್ಕೆ ಒಳಪಟ್ಟ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಿಸಿ ಮನ್ನಾ ಜಮೀನು ಎಂಬ ಪರಿಕಲ್ಪನೆ ಇದ್ದು, ಈ ಹಿಂದೆ Standing Orders of the Board of Revenue of the erstwhile provins Madras ನಂತೆ ಪರಿಶಿಷ್ಟ ಜಾತಿ ಮತ್ತು ಪಂಗಡ ವರ್ಗದವರಿಗಾಗಿ "DC Manna Land" ಎಂದು ಗುರುತಿಸಿ ಮೀಸಲಿರಿಸಲಾಗುತ್ತಿತ್ತು. ಅಡಂಗಲ್‌ನಲ್ಲಿ ಇರುವ ನಮೂದನ್ನು ಆಧರಿಸಿ ಕರ್ನಾಟಕ ಭೂಕಂದಾಯ ಅಧಿನಿಯಮ, 1964 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮ, 1969 ಜಾರಿಗೆ ಬಂದ ನಂತರ ಪಹಣಿ ಪತ್ರಿಕೆಯ ಕಲಂ-11 ರಲ್ಲಿ DC Manna Land ಎಂದು ದಾಖಲು ಮಾಡಲಾಗಿರುತ್ತದೆ.<br><br>ಪ್ರಸ್ತುತ ಸದರಿ ಜಮೀನುಗಳ ಪೈಕಿ ಮಂಜೂರಾತಿಯಾದ ಜಮೀನುಗಳು ಮಂಜೂರಾತಿದಾರರ ಸ್ವಾಧೀನದಲ್ಲಿದ್ದು, ಉಳಿದ ಜಮೀನುಗಳು ಸರ್ಕಾರದ ಸ್ವಾಧೀನದಲ್ಲಿರುತ್ತವೆ. |
| (ಆ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸಾಮಾಜಿಕವಾಗಿ ಶೋಷಿತ ಜನರಿಗೆ ಡಿಪ್ರೆಸ್ಡ್ ಕ್ಲಾಸ್ ಮಾನದಂಡದಡಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒಟ್ಟು 12668 ಪ್ರಕರಣಗಳಲ್ಲಿ 6478.485 ಎಕರೆ ಮತ್ತು ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗ ಒಟ್ಟು 3802 ಪ್ರಕರಣಗಳಲ್ಲಿ 4184.94 ಎಕರೆ ಜಮೀನನ್ನು ಮಂಜೂರು ಮಾಡಿರುವುದು ನಿಜವೇ ಯಾವ ಯಾವ ಸಮುದಾಯಗಳಿಗೆ ಎಷ್ಟು ಭೂ ಮಂಜೂರಾತಿ ಮಾಡಲಾಗಿದೆ; (ಸಮುದಾಯಗಳ ಹೆಸರು ಸಹಿತ ಲಭ್ಯವಿರುವ ಪಟ್ಟಿ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಒಟ್ಟು 12668 ಪ್ರಕರಣಗಳಲ್ಲಿ ಸುಮಾರು 6478 ಎಕರೆ ಮತ್ತು 49 ಎಕರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಒಟ್ಟು 3802 ಪ್ರಕರಣಗಳಲ್ಲಿ 4184 ಎಕರೆ ಮತ್ತು 94 ಸೆಂಟ್ಸ್ ವಿಸ್ತೀರ್ಣದ ಜಮೀನನ್ನು ಮಂಜೂರು ಮಾಡಲಾಗಿದ್ದು, ಈ ಪೈಕಿ 2777 ಪ್ರಕರಣಗಳಲ್ಲಿ 2879 ಎಕರೆ ಮತ್ತು 90 ಸೆಂಟ್ಸ್ ವಿಸ್ತೀರ್ಣದ ಜಮೀನು ಡಿ.ಸಿ. ಮನ್ನಾ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ. |

| | | |
|---|---|---|
| | | ಡಿ.ಸಿ. ಮನ್ನಾ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಕೈಗೊಳ್ಳಬೇಕಾದ ಕ್ರಮಗಳನ್ನು Standing Orders of the Board of Reveune 38 ರಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ. "RESERVATION OF LAND FOR Assignment to depressed Classes:-<br>In the case of villages which contain a considerable extent of land available for occupation, the Divisional Officer should and in all others villages, he may, if he thinks it's necessary in the interest of the depressed classes, set apart a specific area for assignment for Cultivation to the depressed classes.<br><br>ಆದುದರಿಂದ ಡಿ.ಸಿ. ಮನ್ನಾ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಹೊರತುಪಡಿಸಿ ಇತರರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. |
| (ಇ) | ಈ ಜಮೀನುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ವ್ಯಕ್ತಿಗಳ ಸ್ವಾಧೀನದಲ್ಲಿ ಇರುವ ಜಮೀನು ಎಷ್ಟು; ಡಿ ಸಿ ಮನ್ನಾ ಜಮೀನುಗಳನ್ನು ಮಂಜೂರು ಮಾಡುವಾಗ ಇದ್ದ ಪರಿಶಿಷ್ಟ ಜಾತಿ/ಪಂಗಡದ ಸಮುದಾಯಗಳು ಯಾವುವು; (ಸಮುದಾಯದ ಹೆಸರು ಸಹಿತ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮಂಜೂರಾದ ಒಟ್ಟು 5308 ಎಕರೆ ಮತ್ತು 29 ಸೆಂಟ್ಸ್ ವಿಸ್ತೀರ್ಣದ ಜಮೀನು ಮಂಜೂರಿದಾರರ ಸ್ವಾಧೀನದಲ್ಲಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿರುವ 2879 ಎಕರೆ ಮತ್ತು 90 ಸೆಂಟ್ಸ್ ವಿಸ್ತೀರ್ಣದ ಜಮೀನು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯದ ವ್ಯಕ್ತಿಗಳ ಸ್ವಾಧೀನದಲ್ಲಿರುತ್ತದೆ.<br><br>ಡಿಸಿ ಮನ್ನಾ ಜಮೀನುಗಳನ್ನು ಮಂಜೂರಾತಿ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಿಗೆ ಮಂಜೂರಾತಿ ಮಾಡಲಾಗುತ್ತಿದೆ. |
| (ಈ) | ಈಗಾಗಲೇ ಮಂಜೂರಾಗಿರುವ ಈ ಜಮೀನುಗಳ ಪ್ರಸ್ತುತ ಸ್ಥಿತಿಗತಿ ಏನು: ಎಷ್ಟು ಜಮೀನು ಆಕ್ರಮಣವಾಗಿದೆ: ಎಷ್ಟು ಜಮೀನು 94 ಸಿ, 94 ಸಿಸಿ ಮತ್ತು ಬಗರ್ ಹುಕುಂ ಇತ್ಯಾದಿಗಳಿಗೆ ಮಂಜೂರಾಗಿದೆ: ಈ ಕುರಿತು ತಾಲ್ಲೂಕುವಾರು ಅಂಕಿ ಅಂಶಗಳಿವೆಯೇ: ಡಿ ಸಿ ಮನ್ನಾ ಜಮೀನುಗಳನ್ನು ಸಂರಕ್ಷಿಸಲು ಮತ್ತು ಸಂಬಂಧಪಟ್ಟವರಿಗೆ ವಿತರಿಸಲು ಯಾವಾಗ ಕ್ರಮ ವಹಿಸಲಾಗುವುದು: | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮಂಜೂರಾಗಿರುವ ಜಮೀನುಗಳು ಮಂಜೂರಾತಿದಾರರ ಸ್ವಾಧೀನದಲ್ಲಿದ್ದು, ಮಂಜೂರಾತಿದಾರರು ಮಂಜೂರು ಮಾಡಲಾದ ಉದ್ದೇಶಗಳಿಗೆ ಉಪಯೋಗಿಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 76 ಎಕರೆ ಮತ್ತು 26 ಸೆಂಟ್ಸ್ ವಿಸ್ತೀರ್ಣದ ಡಿ.ಸಿ. ಮನ್ನಾ ಜಮೀನು ಅತಿಕ್ರಮಣವಾಗಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ಒಟ್ಟು 155 ಎಕರೆ ಮತ್ತು 27 ಸೆಂಟ್ಸ್ ವಿಸ್ತೀರ್ಣದ ಡಿ.ಸಿ. ಮನ್ನಾ ಜಮೀನು ಅತಿಕ್ರಮಣವಾಗಿರುತ್ತದೆ. |

| | | |
|---|---|---|
| | | ಡಿ.ಸಿ. ಮನ್ನಾ ಜಮೀನುಗಳನ್ನು 94ಸಿ, 94ಸಿಸಿ ಮತ್ತು ಬಗರ್ ಹುಕುಂ ಇತ್ಯಾದಿಗಳಿಗೆ ಮಂಜೂರು ಮಾಡಿರುವುದಿಲ್ಲ. ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969 ರಲ್ಲಿ ಡಿ.ಸಿ. ಮನ್ನಾ ಜಮೀನನ್ನು ಮಂಜೂರು ಮಾಡುವ ಬಗ್ಗೆ ನಿರ್ದೇಶನವಿರುವುದಿಲ್ಲ.<br>ಡಿ.ಸಿ. ಮನ್ನಾ ಜಮೀನುಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಉಡುಪಿ ಜಿಲ್ಲಾಧಿಕಾರಿಯವರ ನಡವಳಿ ಸಂಖ್ಯೆ: LND DCR 19/2023, ದಿನಾಂಕ: 25.11.2024 ರಂತೆ ಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿ ಸಭೆಯನ್ನು ಆಯೋಜಿಸಿ ಅಳತೆ ಕಾರ್ಯ ಕೈಗೊಂಡು ಲಭ್ಯ ಜಮೀನುಗಳನ್ನು ನಿವೇಶನ ರಹಿತ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಅರ್ಹ ಫಲಾನುಭವಿಗಳಿಗೆ ಹಂಚಲು ಕ್ರಮವಹಿಸಲಾಗುವುದು. |
| (ಊ) | ಇತರರು ಸ್ವಾಧೀನಪಡಿಸಲು ಅವಕಾಶವಿರದ ಡಿ ಸಿ ಮನ್ನಾ ಜಮೀನುಗಳು ಪರಬಾಹರೆಯಾಗಿದ್ದಲ್ಲಿ ಹಿಂಪಡೆಯಲು ಇಲಾಖೆ ಏನು ಕ್ರಮ ವಹಿಸುತ್ತಿದೆ? (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲೆಯಲ್ಲಿ ಡಿ.ಸಿ. ಮನ್ನಾ ಜಮೀನುಗಳು ಪರಭಾರೆಯಾದ ಪ್ರಕರಣಗಳಿರುವುದಿಲ್ಲ.<br><br>ಉಡುಪಿ ಜಿಲ್ಲೆಯಲ್ಲಿ ಒಟ್ಟು 155 ಎಕರೆ ಮತ್ತು 27 ಸೆಂಟ್ಸ್ ವಿಸ್ತೀರ್ಣದ ಡಿ.ಸಿ. ಮನ್ನಾ ಜಮೀನು ಅತಿಕ್ರಮಣವಾಗಿರುತ್ತದೆ.<br><br>ಡಿ.ಸಿ. ಮನ್ನಾ ಜಮೀನುಗಳು ಸರ್ಕಾರದ ಜಮೀನುಗಳಾಗಿದ್ದು, ಸದರಿ ಜಮೀನುಗಳ ಮಂಜೂರಾತಿ ಪೂರ್ವದಲ್ಲಿ ಒತ್ತುವರಿ ಆಗಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 104 ರಂತೆ ಕ್ರಮವಹಿಸಲಾಗುವುದು. ಒಂದು ವೇಳೆ ಡಿಸಿ ಮನ್ನಾ ಜಮೀನು ಮಂಜೂರಾತಿ ಆದ ನಂತರದಲ್ಲಿ ಪರಭಾರೆ ಆಗಿದ್ದಲ್ಲಿ ಪಿಟಿಸಿಎಲ್ ಕಾಯ್ದೆ, 1978ರ ಕಲಂ 5 ರನ್ವಯ ಒತ್ತುವರಿಯನ್ನು ತೆರವುಗೊಳಿಸಲು ಅವಕಾಶ ಇರುತ್ತದೆ. |

(ಕಡತ ಸಂಖ್ಯೆ:ಆರ್‌ಡಿ 24 ಎಲ್‌ಜಿಎ 2025)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು